ಜಾತಿಯವನು, ಬಡವಶ್ರೀಮಂತ ಮುಂತಾದ ಭೇದ ಭಾವಗಳಿಂದ ಮಾಸ್ತರರು ದೂರವೇ ಇದ್ದರು. ಆ ವಿಚಾರದಲ್ಲಿ ಬಸಣ್ಣ ಇವತ್ತಿಗೂ ಹಾಗೆಯೇ ಇದ್ದಾರೆ ಎನಿಸುವುದು. ಅದನ್ನು ಮಾಯಕ್ಕ ಅನೇಕ ಸಲ ಹೇಳಿಯೂ ಹೇಳಿದ್ದಾಳೆ. ಅದೆಲ್ಲ ಖರೆ. ಆದರೆ ಹಣ ಮತ್ತು ಪ್ರಸಿದ್ಧಿಯ ವಿಷಯ ಬಂದಾಗ ಮಾತ್ರ ಮಾಸ್ತರರು ತತ್ವಗಳನ್ನು ಗಾಳಿಗೆ ತೂರುತ್ತಾರೆಂದು ಕೆಲವರ ಆರೋಪವಾಗಿತ್ತು. ಮನುಷ್ಯರೆಂದ ಮೇಲೆ ಸಣ್ಣಪುಟ್ಟ ದೋಷಗಳು ಇದ್ದೇ ಇರುತ್ತವೆ, ಅದೇನು ಮಹಾ! ಮೆಚ್ಚಿಕೊಳ್ಳುವವರು ಇದ್ದೇ ಇದ್ದರು. ಅಂತಹ ಆರೋಪಗಳು ರಾಜಕೀಯ ಪ್ರೇರಿತವೆಂದು ಹಿನ್ನೆಲೆಗೆ ಸರಿಯುತ್ತಿದ್ದವು. ಏನೇ ಇರಲಿ, ಸುತ್ತಲಿನ ಹಳ್ಳಿಗಳಲ್ಲಿ ಬಸಣ್ಣ ಮಾಸ್ತರರೆಂದರೆ ಪರೋಪಕಾರದ ಮಾಸ್ತರರು ಎಂದೇ ಖ್ಯಾತರಾಗಿದ್ದರು. ದೊಡ್ಡ ಶಿಷ್ಯಬಳಗವಿತ್ತು. ಮಾಯಕ್ಕನಿಗೆ ಇಂತಹ ವ್ಯಕ್ತಿಗಳ ಬೆಂಬಲವಿದ್ದುದರಿಂದ ಅವಳಿಗೆ ಮತ್ತಷ್ಟು ಬಲ ಬಂದಿತ್ತು. ಒಳ್ಳೆಯ ಶಿಕ್ಷಕರೆಂದು ರಾಷ್ಟ್ರಪ್ರಶಸ್ತಿ ಸಹ ಬಸಣ್ಣನವರಿಗೆ ಬಂದಿತ್ತು.

ರಾಷ್ಟ್ರಪತಿಗಳಿಂದ ಪುರಸ್ಕಾರ ಪಡೆಯುತ್ತಿರುವ ದೊಡ್ಡ ಸೈಜಿನ ಫೋಟೊವೊಂದು ಮಾಸ್ತರರ ಮನೆಯ ಎದುರುಗೋಡೆಯಲ್ಲಿ ಅಲಂಕೃತಗೊಂಡಿದೆ. ಅವರ ವಿದ್ಯಾರ್ಥಿ ಬಳಗದಲ್ಲಿ ಅನೇಕರು ಒಳ್ಳೆಯ ನೌಕರಿ ಹಿಡಿದಿದ್ದರು. ಕೆಲವರು ಮಿಲಿಟರಿ ಸೇರಿದ್ದರು. ಮಿಲಿಟರಿ ಸೇರಿದ್ದ ಇಬ್ಬರು ವಿದ್ಯಾರ್ಥಿಗಳ ಬಲದಿಂದ ಅವರು ಕೆಲವು ಸಲ ಆಟ ಆಡುವುದಿತ್ತು. ಈ ಮಾಸ್ತರರ ಜೊತೆ ಯಾರದಾದರೂ ಕಲಹ ಸಂಭವಿಸಿತೆನ್ನಿ, ಆಗ ಮಾಸ್ತರರು ಸೀದಾ ಮಿಲಿಟರಿಯಲ್ಲಿರುವ ತಮ್ಮ ವಿದ್ಯಾರ್ಥಿಗೆ ಪತ್ರ ಬರೆಯುತ್ತಿದ್ದರು. 'ಇಂತಿಂಥವರು ನನಗೆ ಕಿರುಕುಳ ಕೊಡುತ್ತಿದ್ದಾರೆ. ಈ ಊರಲ್ಲಿ ನಾನು ಇರುವುದೇ ಕಷ್ಟವಾಗಿದೆ. ಇದನ್ನು ಪ್ರಿಯ ಶಿಷ್ಯನಾದ ನಿನ್ನ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ನಂಬಿದ್ದೇನೆ.' ಮಿಲಿಟರಿಯಲ್ಲಿ ಉನ್ನತ ಅಧಿಕಾರಿಯಾಗಿರುವ ಇವರ ಶಿಷ್ಯ ಸೀದಾ ಪೊಲೀಸ್ ಸ್ಟೇಷನ್‌ಗೆ ಪತ್ರ ಬರೆಯುತ್ತಿದ್ದ.'ನನ್ನ ಸಂಬಂಧಿಕರೂ ಮತ್ತು ಆತ್ಮೀಯರೂ ಆಗಿರುವ ಶ್ರೀ ನಾವಲಗಟ್ಟಿ ಸಾಹೇಬರಿಗೆ ಕೆಲವರು ವಿನಾಕಾರಣ ತೊಂದರೆ ಕೊಡುತ್ತಿದ್ದು ಅಂತಹ ಸಮಾಜ ವಿರೋಧಿ ಹಾಗೂ ದೇಶವಿರೋಧಿ ವ್ಯಕ್ತಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದು.' ಇಂತಹ ಒಕ್ಕಣಿಕೆಯ ಪತ್ರವೊಂದು ದಿಲ್ಲಿಯಿಂದ ಬಂದಾಗ ಯಾರು ತಾನೆ ಕ್ರಮ ಕೈಗೊಳ್ಳುವುದಿಲ್ಲ? ಪೋಲಿಸರ ಹೆಸರು ಕೇಳಿದರೇನೆ ಉಚ್ಚೆ ಹೊಯ್ದುಕೊಳ್ಳುವ ಕಾಲದಲ್ಲಿ ಇನ್ನು ಅವರು ವಿಚಾರಣೆಗೆ ಮನೆಗೆ ಬಂದರೆ ಹೇಗಿರಬೇಡ? ಹೀಗಾಗಿ ತಮ್ಮ ಬೆಂಬಲಕ್ಕೆ ದೊಡ್ಡ ಮಿಲಿಟರಿ ಪಡೆಯೇ ಇದೆ ಎನ್ನುವ ಗರ್ವ ಮಾಸ್ತರರಲ್ಲಿತ್ತು.

ತನಗೆ ಸಲ್ಲಬೇಕಾದ ಗೌರವ ಇನ್ನೂ ಸಂದಿಲ್ಲವೆಂದೆ ಮಾಸ್ತರರ ಅಳಲು. ಅವರ ಮಹತ್ವಾಕಾಂಕ್ಷೆಯ ಬಗ್ಗೆ ಮಾಯಕ್ಕನಿಗೆ ಅರಿವಿತ್ತು. ಆದರೆ ಅಂತಹದನ್ನು ಹೇಗೆ ಕಡೆಗಣಿಸಬೇಕು ಎನ್ನುವುದೂ ಅವಳಿಗೆ ಗೊತ್ತಿತ್ತು. ಯಾರನ್ನು ಯಾವ ರೀತಿ ಬಳಸಿಕೊಳ್ಳಬೇಕು ಎನ್ನುವುದನ್ನು ಅವಳಿಗೆ ಹೇಳಿಕೊಡಬೇಕೆ?

ಮಾಸ್ತರರು ಸದ್ಯಕ್ಕಂತೂ ಮಾಯಕ್ಕಳಿಗೆ ನಿಷ್ಠರಾಗಿ ಅವಳ ಏಳ್ಗೆಯಲ್ಲಿ ಸಂತೋಷದಿಂದ ಪಾಲ್ಗೊಂಡಿದ್ದರು. ಸಾರ್ವಜನಿಕ ಸಭೆಯಲ್ಲಿ ಅವರು ಅವಳ ಗುಣಗಾನ ಮಾಡತೊಡಗಿದರೆ ಅದಕ್ಕೆ ಕಲ್ಲು ಕೂಡ ಕರಗುತ್ತಿತ್ತು. ಸಕಲ ಸಚರಾಚರಕ್ಕೆ ಮಾಯಕ್ಕ ಬೇಕಾದವಳು ಎಂದು ಮಾಸ್ತರರು ಹೇಳುವಾಗ 'ಮಾಯಕ್ಕನಿಗೆ ಜಯವಾಗಲಿ, ಮಾಯಕ್ಕನಿಗೆ ಜಯವಾಗಲಿ' ಎನ್ನುವ ಘೋಷ ಮುಗಿಲು ಮುಟ್ಟುತ್ತಿತ್ತು.

'ಮಾಯಕ್ಕ ನನಗಿಂತ ವಯಸ್ಸಿನಲ್ಲಿ ಸಣ್ಣಾಕಿ. ಆದರೆ ಬುದ್ಧಿಯಲ್ಲಿ, ಕುಶಲತೆಯಲ್ಲಿ ನನಗಿಂತ ಅಕ್ಕ ಬಹಳ ಎತ್ತರದವರು. ಅವರು ತಮ್ಮ ಜೀವನದಲ್ಲಿ ಬಾಳ ಕಷ್ಟನಷ್ಟಗಳನ್ನ ಅನುಭವಿಸಿದವರು. ಅವರು ಹಾದು ಬಂದಂತಹ ಕಿಚ್ಚಿನೊಳಗ ಬ್ಯಾರೆ ಯಾರೇ ಬಂದಿದ್ರು ಅವರು ಸುಟ್ಟು ಭಸ್ಮ ಆಗಿರತಿದ್ರು,' ಮಾಸ್ತರರ ಬಣ್ಣನೆಗೆ ಜನ ಪರವಶರಾಗುವರು. 'ಕೊನೆಯದಾಗಿ ಒಂದು ಮಾತು. ಮಾಯಕ್ಕ ತಾನು ಎಷ್ಟು ಕಷ್ಟಪಟ್ಟೇನಿ ಅಂತ ಬಾಯಿಬಿಟ್ಟು ಹೇಳಿಕೊಳ್ಳಂಗಿಲ್ಲ. ನಾನು ನೋಡೇನಲ್ಲ. ಅಂಥ ಹೆಣ್ಣುಮಗಳನ್ನು ಪಡೆಯೋದು ನಮ್ಮ ಗ್ರಾಮದ ಪುಣ್ಯ. ಸರಕಾರಿ ದುಡ್ಡಿನ್ಯಾಗ ಸ್ವಂತ ಕೆಲಸ ಮಾಡಿಕೊಳ್ಳೋವಂತಹ ಆಸೆ ಮಾಯಕ್ಕಗ ಏನೇನೂ ಇಲ್ಲ. ಅವಳ ಬ್ಯಾಂಕ್ ಪಾಸ್‌ಬುಕ್ ಇಲ್ಲೆ ಐತಿ ನೋಡ್ರಿ. ಅವರ ಖಾತೆದಾಗ ಎರಡು ಸಾವಿರ ರೂಪಾಯಿ ಸೈತ ಇಲ್ಲ. ಅದಕ್ಕಾಗಿ ಮಾಯಕ್ಕನಿಗೆ ಬೆಂಬಲವಾಗಿ ನಿಲ್ಲೋದು ನಮ್ಮ ಕರ್ತವ್ಯ ಆಗೇತಿ. ಮಾಯಕ್ಕ ಎಷ್ಟೆಲ್ಲ ಅವಮಾನ ಅನುಭವಿಸಿದ್ಲು. ಎಷ್ಟೋ ಮಂದಿ ಕಡೇಂದ ಎಂಥೆಂಥವೋ ಮಾತು ಅನಿಸಿಕೊಂಡ್ಲು. ಆದರೆ ಮಾಯಕ್ಕ ಯಾರಿಗೂ ಅಂಜುವಂಥಾಕಿ ಅಲ್ಲ, ಅಳುಕುವಂಥಾಕಿ ಅಲ್ಲ. ಹಂಗಂತನ ಆಕಿ ಬಹುಮತದಿಂದ ಆರಿಸಿ ಬಂದಾಳ. ಇನ್ನು ಮುಂದೇನೂ ಅವರು ನಿಮ್ಮ ಆಶೀರ್ವಾದದಿಂದ ಆರಿಸಿ ಬರ್ತಾಳು. ಹೌದಲ್ಲೋ? ಆರಿಸಿ ತರ್ತೀರೋ, ಇಲ್ಲೋ?' ಮಾಸ್ತರರು ಮಾತು ನಿಲ್ಲಿಸಿದಾಗ 'ಮಾಯಕ್ಕನಿಗೆ ಜಯವಾಗಲಿ' ಎನ್ನುವ ಘೋಷಣೆ ನಾಲ್ಕೂ ದಿಕ್ಕಿನಿಂದ ಅನುರಣಿಸಿತು. ಮಾಯಕ್ಕಳಿಗೇನೂ ಅಧ್ಯಕ್ಷ ಪಟ್ಟ ಸುಲಿದ ಬಾಳೆಹಣ್ಣಿನ ರೀತಿಯಲ್ಲಿ ಬಂದಿಲ್ಲ. ಅದನ್ನು ಆಕೆ ಹೇಳಿಯೂ ಹೇಳುತ್ತಿದ್ದಳು.

'ನಾನು ಈ ಪದವಿಗೆ ಏರಲಿಕ್ಕೆ ಹತ್ತು ಸಲ ಸತ್ತು, ಹತ್ತು ಸಲ ಹುಟ್ಟೇನಿ. ಸುಡುಸುಡು ಬೆಂಕಿಯೊಳಗ ಹಾಯ್ದು ಬಂದೇನಿ. ಗವಿಯಂತ ಗವಿಯೊಳಗೆ ನುಗ್ಗಿ ಹುಲಿಯಂತಹ ಹುಲಿಯನ್ನೆ ಎದುರು ಹಾಕ್ಕೋಂಡೇನಿ. ನನ್ನನ್ನ ಹಂಗೇ ಅಂಗಾತ ನುಂಗಲಿಕ್ಕೆ ಬಂದಂತಹ ಹುಲೀನ ಎರಡು ಹೋಳು ಮಾಡಿ ಚೆಲ್ಲೇನಿ. ನನ್ನ ಎದಿಗೆ ಕೊಂಬು ಚುಚ್ಚಾಕ ಬಂದಂತಹ ಸೊಕ್ಕಿದ ಹೋರಿಯನ್ನ ಕರಾ ಮಾಡಿ ನನ್ನ ಮನಿಯೊಳಗ ಸಾಕೇನಿ'. ಆಕೆ ಇದನ್ನೆಲ್ಲ ಯಾರ ಬಗ್ಗೆ ಹೇಳುತ್ತಿದ್ದಾಳೆ? ಕೂಡಿದ ಮಂದಿ ತಮಗೆ ತೋಚಿದ ವ್ಯಕ್ತಿಗಳ ಹೆಸರುಗಳನ್ನು ಬಿಟ್ಟ ಸ್ಥಳದಲ್ಲಿ ತುಂಬುತ್ತಿದ್ದರು!

(ಸಶೇಷ)

## ಬಸು ಬೇವಿನಗಿಡದ



ಸಮಕಾಲೀನ ಪ್ರಮುಖ ಲೇಖಕರಲ್ಲಿ ಒಬ್ಬರಾದ ಇವರು, ಕಥೆ, ಕಾದಂಬರಿ, ಅನುವಾದ ಹಾಗೂ ಕಾವ್ಯಕ್ಷೇತ್ರಗಳಲ್ಲಿ ಹೆಸರಾಗಿರುವವರು. ಇದುವರೆಗೆ ನಲವತ್ತು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಕನಸು', 'ಇಳೆಯ ಅರ್ಥ' ಕವನ ಸಂಕಲನಗಳು, 'ತಾಯವ್ವ', 'ಬಾಳೆಯ ಕಂಬ', 'ಹೊಡಿ ಚಕ್ಕಡಿ', 'ಉಗುಳುಬುಟ್ಟಿ', ಹಾಗೂ 'ನೆರಳಿಲ್ಲದ ಮರ' ಎನ್ನುವ ಐದು ಕಥಾ ಸಂಕಲನಗಳು, 'ಅಪರಾಜಿತೆ', 'ಕಮಲಾದೇವಿ ಚಟ್ಟೋಪಾಧ್ಯಾಯ', 'ಸ್ವಾತಂತ್ರ್ಯ ಚಳವಳಿ ಹಾಗೂ ಭಾರತೀಯ ಮುಸ್ಲಿಮರು', 'ಸಮಕಾಲೀನ ಭಾರತೀಯ ಕಥೆಗಳು', 'ದಕ್ಕದ ಕಾಡು', 'ಮೊಪಾಸಾ ಕಥೆಗಳು' ಮುಂತಾದ ಅನುವಾದ ಕೃತಿಗಳು, 'ನಾಳೆಯ ಸೂರ್ಯ', 'ಓಡಿಹೋದ ಹುಡುಗ', 'ಒಳ್ಳೆಯ ದೆವ್ವ', 'ದಿನಕರನೊಂದಿಗೆ ದನಕರು' ಮಕ್ಕಳ ಕಾದಂಬರಿಗಳು ಸಾಹಿತ್ಯಲೋಕದ ಗಮನ ಸೆಳೆದಿವೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುನವಳ್ಳಿಯಲ್ಲಿ 1964ರಲ್ಲಿ ಹುಟ್ಟಿದ ಬಸು ಬೇವಿನಗಿಡದ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಇಂಗ್ಲಿಷ್ ಪದವಿ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಬೇಂದ್ರೆ ಕಾವ್ಯದ ಮೇಲೆ ಪಿಎಚ್‌.ಡಿ ಪದವಿ ಪಡೆದಿದ್ದಾರೆ. ಆಕಾಶವಾಣಿ ಉದ್ಯೋಗಿಯಾಗಿ ಧಾರವಾಡ, ಕಲಬುರ್ಗಿ, ವಿಜಯಪುರ, ಕಾರವಾರ ಮುಂತಾದೆಡೆ 35 ವರ್ಷಗಳಷ್ಟು ದೀರ್ಘ ಸೇವೆ ಸಲ್ಲಿಸಿದ್ದಾರೆ. ಧಾರವಾಡ ಆಕಾಶವಾಣಿಯ ನಿರ್ದೇಶಕರಾಗಿ ದುಡಿದು ನಿವೃತ್ತರಾದವರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ, ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರ, ಅನುವಾದ ಕ್ಷೇತ್ರದಲ್ಲಿನ ಸಾಧನೆಗಾಗಿ ಕುವೆಂಪು ಭಾಷಾ ಭಾರತಿ ಗೌರವ ಪ್ರಶಸ್ತಿ, ಎರಡು ಸಲ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಮಕ್ಕಳ ಚಂದಿರ ಪ್ರಶಸ್ತಿ, ತುಮಕೂರಿನ ವೀಚಿ ಸಾಹಿತ್ಯ ಪ್ರಶಸ್ತಿ, ಗಾಂಧಿ ಕಥಾ ಪ್ರಶಸ್ತಿ, ಕ.ಸಾ.ಪ ದತ್ತಿ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಇವರಿಗೆ ಸಂದಿವೆ. 'ನಂಬಿಕೆಯ ನೂಲು' ಸುಧಾ ಓದುಗರಿಗಾಗಿ ಅವರು ಬರೆದ ವಿಶಿಷ್ಟ ಧಾರಾವಾಹಿ.